ಕನ್‌ಫರ್ಮ್ ಮಾಡಿಯೇ ನಿಮ್ಮ ಬಳಿಗೆ ಬಂದದ್ದು" ಎಂದ ಶ್ರೀನಿವಾಸ ಕೈಯಲ್ಲಿದ್ದ ಫೋಟೊಗಳನ್ನು ಸಂಪಾದಕರ ಕೈಗಿತ್ತ. ಸರಿ, ಆಚೀಚೆ ಈ ಫೋಟೊಗಳು, ನಡುವೆ ಶಿವಣ್ಣರವರ ಫೋಟೊ ಸೆಟ್ ಮಾಡಿಸು. ಮುಖಪುಟದ ಎಡಬದಿಯಲ್ಲಿ ಮೇಲ್ಗಡೆ ಹಾಕಿಸು... ನೋಡೋಣ ಆದದ್ದಾಗುತ್ತೆ" ಅಂದರು. ''ಸಾರ್ ವರದಿಯಲ್ಲಿ ನನ್ನ ಹೆಸರೂ ಬರಬೇಕು" ಅಂಗಲಾಚಿದ ಶ್ರೀನಿವಾಸನಿಗೆ "ಹಾಕಿಕೋ, ಆದರೆ ನಾಳೆ, ಮತ್ತಿನ್ನೆರಡು ವಾರ... ಜಾಗ್ರತೆಯಾಗಿ ಇರು..." ಅಂದರು ಸಂಪಾದಕರು. ಸೂಕ್ಷ್ಮ ವಿಷಯವಾದ್ದರಿಂದ ಪತ್ರಿಕೆಯ ಯಜಮಾನರಿಗೂ ವಿಷಯ ತಿಳಿಸಿ, ಸೆಕ್ಯುರಿಟಿಯವರಿಗೆ ಬೆಳಿಗ್ಗೆ ಜಾಗರೂಕರಾಗಿರುವಂತೆ ಸೂಚನೆ ಕೊಟ್ಟು ಸಂಪಾದಕರು ರಾತ್ರಿ ಹನ್ನೆರಡು ಗಂಟೆ ಹೊತ್ತಿಗೆ ಮನೆಗೆ ಬಂದು ಸೆಲ್ ಫೋನು ಸ್ವಿಚ್ ಆಫ್ ಮಾಡಿ ತಣ್ಣಗೆ ಮಲಗಿಕೊಂಡರು.

ಬೆಳಿಗ್ಗೆ ಒಂಬತ್ತು ಗಂಟೆಯವರೆಗೆ ಸೆಲ್ ಫೋನ್ ಮುಟ್ಟುವ ಧೈರ್ಯಮಾಡದ ಸಂಪಾದಕರು ಮೆಲ್ಲಗೆ ಅದನ್ನೆತ್ತಿ ಚಾರ್ಜಿಗಿಟ್ಟರು. ಹತ್ತುಗಂಟೆಗೆ ಮನೆಯ ಹೊರಗೆ ಇಣುಕಿನೋಡಿ, ಯಾರೂ ಇಲ್ಲದ್ದನ್ನು ಖಾತರಿ ಪಡಿಸಿಕೊಂಡು ತನ್ನ ಕಾರನ್ನು ಮನೆಯಲ್ಲೇ ಬಿಟ್ಟು ಟ್ಯಾಕ್ಸಿ ಹಿಡಿದು ಆಫೀಸಿಗೆ ಹೊರಟರು. ದಾರಿಯಲ್ಲೇ ಆಫೀಸಿಗೆ ಫೋನ್ ಮಾಡಿ ಆಫೀಸಿನ ಎದುರು ಜನಸೇರಿದ್ದಾರೋ ಎಂದು ಕೇಳಿದರು. "ಸರ್, ಯಜಮಾನ್ರು ಪೊಲೀಸ್ ಪ್ರೊಟೆಕ್ಷನ್ ತೆಗೆದುಕೊಂಡಿದ್ದಾರೆ. ಆಫೀಸು ಎದುರು ಪೊಲೀಸರನ್ನು ಬಿಟ್ಟು ಬೇರೆ ಯಾರೂ ಇಲ್ಲ" ಎಂದಳು ಟೆಲಿಫೋನ್ ಆಪರೇಟರ್. ಸೆಲ್ ಫೋನ್ ಸ್ವಿಚ್ ಆನ್ ಮಾಡುತ್ತಲೇ ಹಲವಾರು ಎಸ್‌ಎಮ್‌ಎಸ್‌ಗಳಿದ್ದವು. ವಾಟ್ಸ್‌ಆ್ಯಪ್ ಮೆಸೇಜುಗಳು ಬಂದು ರಾಶಿ ಬೀಳಲಾರಂಭಿಸಿದ್ದವು. ಯಾವುದನ್ನೂ ನೋಡುವ ಗೋಜಿಗೆ ಹೋಗದೆ ಕಾರಿಳಿದು ನೇರ ತನ್ನ ಕ್ಯಾಬಿನ್ನಿನೆಡೆಗೆ ಧಾವಿಸಿದರು.

"ಸರ್, ಬೆಳಿಗ್ಗಿಂದ ಕಾಲ್ ಮಾಡಿ ನಿಮ್ಮನ್ನೂ ಶ್ರೀನಿವಾಸರನ್ನೂ ಏಕವಚನದಲ್ಲೇ ಕರೆದು ಬಾಯಿಗೆ ಬಂದ ಹಾಗೆ ಬೈತಾ ಇದ್ದಾರೆ. ಆ ಸೂ... ಮಕ್ಕಳು ಅಲ್ಲಿದ್ದಾರಾ ಫೋನ್ ಕೊಡಿ ಅಂತ ಕೇಳುತ್ತಾ ಇದ್ದಾರೆ" ಅಂದಳು ಆಪರೇಟರ್. "ಶ್ರೀನಿವಾಸರು ಹೋಗಿ ಕಂಪ್ಯೂಟರ್ ರೂಮಿನಲ್ಲಿ ಬಚ್ಚಿಟ್ಟುಕೊಂಡಿದ್ದಾರೆ. ನೀವೆಲ್ಲಿ ನಿಮ್ಮ ಕ್ಯಾಬಿನ್ನಿಗೇ ಹೋಗುತ್ತೀರಾ ಸಾರ್?" ಕೇಳಿದ ಜೊತೆಗೇ ಬಂದಿದ್ದ ಸೆಕ್ಯೂರಿಟಿಯ ಹುಡುಗ.

"ನಾನು ಇದಕ್ಕೆಲ್ಲ ಹೆದರೋಲ್ಲ ಕಣಯ್ಯ. ನನ್ನನ್ನು ಕೇಳಿಕೊಂಡು ಯಾರಾದ್ರೂ ಬಂದ್ರೆ ಮೊದಲು ಪರಿಚಯ ಕೇಳು. ನನಗೆ ಹೇಳು. ಒಳಗೆ ಬಿಡಬೇಕೋ ಬೇಡವೋ ನಾನು ತೀರ್ಮಾನಿಸುತ್ತೇನೆ" ಎಂದು ಕೂಡ ಸೇರಿಸಿ ತಮ್ಮ ಕ್ಯಾಬಿನ್ನು ಹೊಕ್ಕು ಕುಳಿತುಕೊಂಡರು. "ಕಾಲ್ ಬಂದ್ರೆ ಯಾರು ಅಂತ ಕೇಳಿ, ನನಗೆ ಹೇಳಿ, ನಾನು ಓಕೆ ಅಂದರೆ ಮಾತ್ರ ಕನೆಕ್ಟ್ ಮಾಡು" ಎಂದು ಆಪರೇಟರಿಗೂ ಸೂಚನೆಯಿತ್ತರು. ಅಷ್ಟೆಲ್ಲ ಹೇಳಿದ ಮೇಲೂ ಒಂದು ಕಾಲ್ ನೇರವಾಗಿ ಕನೆಕ್ಟ್ ಮಾಡಿಕೊಟ್ಟಳು ಆಪರೇಟರ್.

"ಸರ್, ಮುಖ್ಯಮಂತ್ರಿಯವರ ಕಚೇರಿಯಿಂದ. ಮುಖ್ಯಮಂತ್ರಿ ನಿಮಗೆ ಶಹಭಾಷ್ ಅಂದ್ರು. ಅದರೊಂದಿಗೇ ಈ ವಾರ್ತೆಯೆಲ್ಲ ಅವರು ಹೇಗೆ ಕಲೆಹಾಕುತ್ತಾರೆ ಎಂದು ತಿಳ್ಕೊಳ್ಳಿ. ಹೀಗೇ ನೀವೂ ನಮ್ಮಪಕ್ಷದವರ, ವಿರೋಧ ಪಕ್ಷದವರ ಮಾಹಿತಿ ಕಲೆ ಹಾಕಿಡಿ. ನಮ್ಮ ವಿರುದ್ಧ ಯಾರಾದರೂ ಬಾಲ ಬಿಚ್ಚಿದರೆ ಬೇಕಾಗುತ್ತೆ. ಅವರನ್ನು ನೋಡಿ ಸ್ವಲ್ಪ ಕಲ್ತುಕೊಳ್ಳಿ ಅಂದ್ರು. ಕಂಗ್ರಾಜುಲೇಶನ್ ಸರ್" ಅಂದರು ಆತ. "ಥ್ಯಾಂಕ್ಸ್ ಸರ್... ಮುಖ್ಯಮಂತ್ರಿಯವರಿಗೂ ಥ್ಯಾಂಕ್ಸ್ ಹೇಳಿ ಸರ್" ಎಂದು ಹೇಳಿ ಸಂಪಾದಕರು ತಮ್ಮಷ್ಟಕ್ಕೆ ತಾವೇ ಬೀಗಿಕೊಂಡರು.

ಸೆಲ್ ಫೋನಲ್ಲಿ ಒಂದು ಕಾಲ್ ಬಂತು. ತೆಗೆದುಕೊಳ್ಳಬೇಕೋ ಬೇಡವೋ ಆಲೋಚನೆಗೆ ಬಿದ್ದ ಸಂಪಾದಕರು ಕೊನೆಗೂ "ಹಲೋ" ಅಂದರು. "ಲೇ ನನ್ಮಗನೇ... ಯಾರೋ ನಮ್ಮ ವಿರೋಧಿಗಳು ಕೊಡುವ ಚಿಕ್ಕಾಸು ಭಿಕ್ಷೆಗೆ ಕೈಯೊಡ್ಡಿ ನಮ್ಮೆದುರು ಬಾಲ ಬಿಚ್ಚುತೀಯೇನೋ... ನೋಡಿಕೊಳ್ಳುತ್ತೇನೆ